K.R.C.E.Society's
G.G.D Arts, B.M.P Commerce & S.V.S Science College,
BAILHONGAL – 591 102, Dist: Belgaum

Tel: 08288-233180 Fax: 08288-233280 E-mail:krcesblh@gmail.com

# ಕ್ರೀಡಾ ವಿಭಾಗದ ವಾರ್ಷಿಕ ವರದಿ 2017–18

ನಮ್ಮ ಮಹಾವಿದ್ಯಾಲಯದ ಕ್ರೀಡಾ ವಿಭಾಗದ ವಾರ್ಷಿಕ ಚಟುವಟಿಕೆಗಳ ಸಂಕ್ಷಿಪ್ತ ವರದಿಯನ್ನು ತಮ್ಮ ಮುಂದೆ ಪ್ರಸ್ತಾಪಿಸಲು ತುಂಬಾ ಸಂತೋಷವೆನಿಸುತ್ತದೆ.

ಮಾನ್ಯ ಪ್ರಾಚಾರ್ಯರು ಕ್ರೀಡಾ ವಿಭಾಗದ ಚಟುವಟಿಕೆಗಳು ಸಾಂಗವಾಗಿ ಸಾಗಲು ಪ್ರೊ. ಬಿ.ಜಿ. ಕಟ್ಟಿ ಅವರನ್ನು ಕ್ರೀಡಾ ಹಾಗೂ ಸಾಂಸ್ಕೃತಿಕ ವಿಭಾಗದ ಉಪಾಧ್ಯಕ್ಷರನ್ನಾಗಿ ಹಾಗೂ ಈ ಕೆಳಕಾಣಿಸಿದ ಪ್ರಾಧ್ಯಾಪಕರನ್ನು ಚೇರಮನ್ನರಾಗಿ ಹಾಗೂ ಪ್ರತಿಭೆ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಕಾರ್ಯದರ್ಶಿಗಳನ್ನಾಗಿ ನೇಮಕ ಮಾಡಿದರು.

| ವಿಭಾಗ | ಚೇರಮನ್ನರು | ಕಾರ್ಯದರ್ಶಿ | ವಿದ್ಯಾರ್ಥಿನಿ ಕಾರ್ಯದರ್ಶಿ |
|---|---|---|---|
| ಅಥ್ಲೆಟಿಕ್ಸ್ | ಪ್ರೊ. ಬಿ.ಬಿ. ಬೂದಿಹಾಳ | ಶ್ರೀ. ಶಿವಾನಂದ. ಎಂ. ಚೌಡಪ್ಪನವರ | ಕು. ಕಾವ್ಯಶ್ರೀ. ಎಸ್. ಸೋಮನಟ್ಟಿ |
| ಕ್ರಿಕೆಟ್ | | ಶ್ರೀ. ಪ್ರವೀಣ. ಎಂ. ಹುನಶಿಕಟ್ಟಿ | |
| ವ್ಹಾಲಿಬಾಲ್/ಬಾಸ್ಕೆಟ್ ಬಾಲ್ | | ಶ್ರೀ. ಮೊಹಮ್ಮದಸೋಯಲ್. ಎಂ.ಜಮಾದಾರ | |
| ಕಬಡ್ಡಿ/ ಖೋಖೋ | | ಶ್ರೀ. ಶಿವಪ್ರಸಾದ. ಕೆ. ಮೂಲಿಮನಿ | |
| ಮೈನರ್ ಗೇಮ್ಸ್ | ಪ್ರೊ. ಯು. ಬಿ. ಹುನಗುಂದ | ಶ್ರೀ. ಶಂಕರ. ಎಂ. ತಿರಕನ್ನವರ | |

ನಮ್ಮ ಮಹಾವಿದ್ಯಾಲಯದ ಕ್ರೀಡಾ ಹಾಗೂ ಸಾಂಸ್ಕೃತಿಕ ವಿಭಾಗಗಳ ಉದ್ಘಾಟನಾ ಸಮಾರಂಭವು ದಿನಾಂಕ 11–08–2017 ರಂದು ಜರುಗಿತು. ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಡಾ. ಸಿದ್ದು. ಪಿ. ಅಲಗೂರ ಕುಲಸಚಿವರು (ಆಡಳಿತ), ರಾ.ಚ.ವಿ. ಬೆಳಗಾವಿ ಇವರು ಆಗಮಿಸಿದ್ದರು. ಶ್ರೀ. ರಾಜಶೇಖರ. ಮೂಗಿ ಅಧ್ಯಕ್ಷರು, ಪುರಸಭೆ ಬೈಲಹೊಂಗಲ, ಶ್ರೀ. ನಿಸಾರಅಹ್ಮದ್. ತಿಗಡಿ ಉಪಾಧ್ಯಕ್ಷರು, ಪುರಸಭೆ ಬೈಲಹೊಂಗಲ. ಶ್ರೀ. ಬಾಬಣ್ಣಾ. ಹರಕುಣಿ. ವಿರೋಧ ಪಕ್ಷದ ನಾಯಕರು, ಪುರಸಭೆ ಬೈಲಹೊಂಗಲ. ಇವರು ಕೂಡ ಸಮಾರಂಭಕ್ಕೆ ಅತಿಥಿಗಳಾಗಿ ಆಗಮಿಸಿದ್ದರು. ಸಮಾರಂಭದ ಉದ್ಘಾಟನೆಯನ್ನು ಶ್ರೀ. ಬಿ.ಎನ್. ಚಿಕ್ಕನಗೌಡರ (ರಾಜು) ಸಿಂಡಿಕೇಟ್ ಸದಸ್ಯರು, ರಾ.ಚ.ವಿ. ಬೆಳಗಾವಿ ಇವರು ನೆರವೇರಿಸಿಕೊಟ್ಟರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ. ವ್ಹಿ.ವ್ಹಿ.ಪಾಟೀಲ, ಬಿ.ಎ. ಎಲ್.ಎಲ್.ಬಿ. ಚೇರಮನ್ನರು. ಉಪ ಸಮಿತಿ ಕೆ.ಆರ್.ಸಿ ಶಿಕ್ಷಣ ಸಂಸ್ಥೆಯ ಪದವಿ ಮಹಾವಿದ್ಯಾಲಯ, ಬೈಲಹೊಂಗಲ ಇವರು ವಹಿಸಿದ್ದರು.

ದಿನಾಂಕ 11 ಮತ್ತು 12 ಸಪ್ಟೆಂಬರ್ 2017 ರಂದು ಬಿ.ಎಲ್.ಡಿ.ಇ ಸಂಸ್ಥೆಯ, ಎಸ್.ಬಿ.ಕಲಾ & ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ ಇವರ ಆಶ್ರಯದಲ್ಲಿ ಜರುಗಿದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2017–18ನೇ ಸಾಲಿನ ಈಜು ತಂಡದ ಆಯ್ಕೆಯಲ್ಲಿ ನಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿಯಾದ ಬಸವರಾಜ. ನೀಲುಪಂತ (ಬಿ.ಎಸ್ಸಿ 3 ನೇ ಸೆಮ್) ಭಾಗವಹಿಸಿದ್ದರು.

ದಿನಾಂಕ 15 & 16 ನೇ ಸಪ್ಟೆಂಬರ್ 2017 ರಂದು ಕೆ.ಎಲ್.ಇ ಸಂಸ್ಥೆಯ ಎಸ್.ವ್ಹಿ.ಬೆಳ್ಳುಬ್ಬಿ ಮಹಾವಿದ್ಯಾಲಯ, ಸವದತ್ತಿ ಇವರ ಆಶ್ರಯದಲ್ಲಿ ಜರುಗಿದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2017–18ನೇ ಸಾಲಿನ ಯೋಗ ತಂಡದ ಆಯ್ಕೆಯಲ್ಲಿ ನಮ್ಮ ಮಹಾವಿದ್ಯಾಲಯದ ಶಿವಕುಮಾರ. ಮರಡಿಮಠ (ಬಿ.ಕಾಂ 1 ನೇ ಸೆಮ್) ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿದ್ದಾರೆ.

ದಿನಾಂಕ 25-09-2017 ರಿಂದ 27-09-2017 ರವರೆಗೆ ಮರಾಠಾ ಮಂಡಳ ಕಲಾ & ವಾಣಿಜ್ಯ ಮಹಾವಿದ್ಯಾಲಯ, ಬೆಳಗಾವಿ ಇವರ ಆಶ್ರಯದಲ್ಲಿ ಜರುಗಿದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2017-18ನೇ ಸಾಲಿನ ಏಕ ವಲಯ ಚೆಸ್ ಪಂದ್ಯಾವಳಿಯಲ್ಲಿ ನಮ್ಮ ಮಹಾವಿದ್ಯಾಲಯದ ತಂಡವು ಭಾಗವಹಿಸಿತ್ತು.

ದಿನಾಂಕ 13 ಮತ್ತು 14 ಸೆಪ್ಟಂಬರ್ 2017 ರಂದು ಶಿವಾನಂದ ಮಹಾವಿದ್ಯಾಲಯ, ಕಾಗವಾಡ ಇವರ ಆಶ್ರಯದಲ್ಲಿ ಜರುಗಿದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2017-18ನೇ ಸಾಲಿನ ಪುರುಷರ ವ್ಹಾಲಿಬಾಲ್ ತಂಡದ ಆಯ್ಕೆಯಲ್ಲಿ ನಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿಯಾದ ಸಾದಿಕ್. ಆಯ್. ತಿಗಡಿ (ಬಿ.ಎ 2 ನೇ ಸೆಮ್) ಭಾಗವಹಿಸಿ ರಾ.ಚ.ವಿ.ವಿ ಬ್ಲೂ ಆಗಿ ಆಯ್ಕೆಯಾಗಿ, ಚೆನ್ನೈನ ಎಸ್.ಆರ್.ಎಂ ವಿ.ವಿ ಯಲ್ಲಿ ನಡೆದ ದಕ್ಷಿಣ ವಲಯ ಅಂತರ ವಿಶ್ವ ವಿದ್ಯಾಲಯಗಳ ವ್ಹಾಲಿಬಾಲ್ ಪಂದ್ಯಾವಳಿಯಲ್ಲಿ ರಾ.ಚ.ವಿ.ವಿ ವನ್ನು ಪ್ರತಿನಿಧಿಸಿ ನಮ್ಮ ಮಹಾವಿದ್ಯಾಲಯಕ್ಕೆ ಹಾಗೂ ನಮ್ಮ ಸಂಸ್ಥೆಗೆ ಕೀರ್ತಿಯನ್ನು ತಂದುಕೊಟ್ಟಿದ್ದಾನೆ.

ದಿನಾಂಕ 15, 16 & 17 ಫೆಬ್ರುವರಿ 2018 ರಂದು ಕೆ.ಎಲ್.ಇ. ಸಂಸ್ಥೆಯ ಬಿ.ಕೆ ಕಾಲೇಜು, ಚಿಕ್ಕೋಡಿ ಇವರ ಆಶ್ರಯದಲ್ಲಿ ಜರುಗಿದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2017-18ನೇ ಸಾಲಿನ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ನಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿದ್ದಾರೆ.

ದಿನಾಂಕ 09 ಮಾರ್ಚ್ 2018 ರಂದು ಆಯ್.ಎಮ್.ಇ.ಆರ್ ಮಹಾವಿದ್ಯಾಲಯ, ಬೆಳಗಾವಿ ಇವರ ಆಶ್ರಯದಲ್ಲಿ ಜರುಗಿದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2017-18ನೇ ಸಾಲಿನ ಪ್ರಥಮ ವಲಯ ಮಟ್ಟದ ಪುರುಷರ ವ್ಹಾಲಿಬಾಲ್ ಪಂದ್ಯಾವಳಿಯಲ್ಲಿ ನಮ್ಮ ಮಹಾವಿದ್ಯಾಲಯದ ತಂಡವು ಭಾಗವಹಿಸಿ ಉತ್ತಮ ಪ್ರದರ್ಶನದೊಂದಿಗೆ ರನ್ನರ್-ಅಪ್ ಸ್ಥಾನವನ್ನು ಪಡೆಯಿತು.

ದಿನಾಂಕ 26 ಮಾರ್ಚ್ 2018 ರಂದು ಸರಕಾರಿ ಪ್ರಥಮ ದರ್ಜೆ ಕಾಲೇಜು ರಾಮದುರ್ಗ ಇವರ ಆಶ್ರಯದಲ್ಲಿ ಜರುಗಿದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2017-18ನೇ ಸಾಲಿನ ಪ್ರಥಮ ವಲಯ ಮಟ್ಟದ ಪುರುಷರ ಕಬಡ್ಡಿ ಪಂದ್ಯಾವಳಿಯಲ್ಲಿ ನಮ್ಮ ಮಹಾವಿದ್ಯಾಲಯದ ತಂಡವು ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿತು.

ಮಹಾವಿದ್ಯಾಲಯದ ವಾರ್ಷಿಕ ಕ್ರೀಡಾಕೂಟವು ದಿನಾಂಕ 22-03-2018 ರಿಂದ 23-03-2018 ರ ವರೆಗೆ ಜರುಗಿತು. ವಿದ್ಯಾರ್ಥಿಗಳಲ್ಲಿ ಶ್ರೀ. ಮೋದಿನ್‌ಸಾಬ. ಕೆ. ಕಿತ್ತೂರ (ಬಿ.ಎ 4 ನೇ ಸೆಮಿಸ್ಟರ್) ಹಾಗೂ ವಿದ್ಯಾರ್ಥಿನಿಯರಲ್ಲಿ ಕು. ನೇತ್ರಾವತಿ. ಎಮ್. ಪರುನವರ (ಬಿ.ಎಸ್ಸಿ 4 ನೇ ಸೆಮಿಸ್ಟರ್) ಇವರು ಸಮಗ್ರ ವೀರಾಗ್ರಣಿಗಳಾಗಿ ಆಯ್ಕೆಯಾಗಿರುತ್ತಾರೆ.

ನಮ್ಮ ಮಹಾವಿದ್ಯಾಲಯದ ಸರ್ವತೋಮುಖ ಅಭಿವೃದ್ಧಿಗೆ ಕಾರಣೀಭೂತರಾದ ಆಡಳಿತ ಮಂಡಳಿಯ ಸದಸ್ಯರುಗಳಿಗೆ, ಹಾಗೂ ವರ್ಷದುದ್ದಕ್ಕೂ ಸೂಕ್ತ ಸಲಹೆ ಸೂಚನೆಗಳನ್ನು ನೀಡುತ್ತಾ ಮಾರ್ಗದರ್ಶನ ಮಾಡಿದ ಪ್ರಾಚಾರ್ಯರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ ಈ ಕ್ರೀಡಾ ವರದಿಯನ್ನು ಸಮಾಪ್ತಿಗೊಳಿಸುತ್ತೇನೆ.

ಜೈ ಹಿಂದ್

ಬೈಲಹೊಂಗಲ
ದಿನಾಂಕ: 02-04-2018

ಶ್ರೀ. ಡಿ.ಎಮ್. ವಿಣಗಿ
ದೈಹಿಕ ಶಿಕ್ಷಣ ನಿರ್ದೇಶಕರು

ಪ್ರೊ. ಜಿ.ಕೆ.ಗಾಂವಕರ
ಉಪಾಧ್ಯಕ್ಷರು
ಸಾಂಸ್ಕೃತಿಕ ಹಾಗೂ ಕ್ರೀಡಾ ವಿಭಾಗ

PRINCIPAL,
K. R. C. E. Society's,
S. G. D. Arts, B. M. P. Commerce
S. V. S. Science College,
BAILHONGAL